Akashvani : Bangalore
National Bulletins In Kannada
27.09.2025 : 1.10 PM
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

27.09.2025 : 1.10 PM
**********

ಮುಖ್ಯಾಂಶಗಳು

೧. ಪ್ರಧಾನಿ ನರೇಂದ್ರ ಮೋದಿ ಇಂದು ಒಡಿಶಾಗೆ ಭೇಟಿ: ೬೦ ಸಾವಿರಕ್ಕೂ ಅಧಿಕ ಮೊತ್ತದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ

೨. ಪ್ಯಾಲೆಸ್ತೀನ್ ಜನರಿಗೆ ಭಾರತ ಬೆಂಬಲ; ನರೇಂದ್ರ ಮೋದಿ ಸರ್ಕಾರಕ್ಕೆ ಪ್ಯಾಲೆಸ್ತೀನ್ ರಾಯಭಾರಿಯಿಂದ ಶ್ಲಾಘನೆ

೩. ನಾಳೆ ಆಕಾಶವಾಣಿಯಲ್ಲಿ ೧೨೬ನೇ ಆವತರಣಿಕೆಯ ಮನ್ ಕಿ ಬಾತ್ ಕಾರ್ಯಕ್ರಮ; ನಾಗರೀಕರನ್ನುದ್ದೇಶಿಸಿ ಪ್ರಧಾನಿ ಭಾಷಣ

೪. ನವದೆಹಲಿಯಲ್ಲಿ ಇಂದಿನಿಂದ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್ ಷಿಪ್ ಆರಂಭ

೫. ಏಷ್ಯಾ ಕಪ್ ಕ್ರಿಕೆಟ್; ನಾಳೆ ಪ್ರಶಸ್ತಿಗಾಗಿ ಭಾರತ ಮತ್ತು ಪಾಕಿಸ್ತಾನ ಹೋರಾಟ

><><><><><><

ಪ್ರಧಾನಿ ನರೇಂದ್ರ ಮೋದಿ ಇಂದು ಒಡಿಶಾ ಪ್ರವಾಸ ಕೈಗೊಂಡಿದ್ದು, ಬೆಳಗ್ಗೆ ಕೈಗಾರಿಕಾ ಪಟ್ಟಣ ಜಾರ್ಸುಗುಡಕ್ಕೆ ಆಗಮಿಸಿದರು. ಈ ವೇಳೆ ಅವರು ೬೦ ಸಾವಿರ ಕೋಟಿ ರೂಪಾಯಿ ಮೌಲ್ಯದ ಬಹು ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಮತ್ತು ಶಿಲಾನ್ಯಾಸ ನೆರವೇರಿಸಲಿದ್ದಾರೆ.

ನಿಗದಿತ ಸಮಯ ೧೧ ಗಂಟೆಗೆ ಸ್ವಲ್ಪ ಮೊದಲು ಪ್ರಧಾನಿ ಜಾರ್ಸುಗುಡ ವಿಮಾನ ನಿಲ್ದಾಣಕ್ಕೆ ಬಂದಿಳಿದರು, ಅಲ್ಲಿ ಅವರನ್ನು ರಾಜ್ಯಪಾಲ ಹರಿ ಬಾಬು ಕಂಭಂಪತಿ, ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಮತ್ತು ಇತರ ಗಣ್ಯರು ಸ್ವಾಗತಿಸಿದರು. ಪ್ರಧಾನಿ, ಅಮ್ಲಿಪಾಲಿ ಮೀಸಲು ಮೈದಾನದಲ್ಲಿ ಸಾರ್ವಜನಿಕರನ್ನುದ್ದೇಶಿ ಭಾಷಣ ಮಾಡಲಿದ್ದಾರೆ. ಪ್ರಧಾನಿ ಉದ್ಘಾಟಿಸಲಿರುವ ಯೋಜನೆಗಳಲ್ಲಿ ದೂರಸಂಪರ್ಕ, ರೈಲ್ವೆ, ಉನ್ನತ ಶಿಕ್ಷಣ, ಆರೋಗ್ಯ ರಕ್ಷಣೆ, ಕೌಶಲ್ಯ ಅಭಿವೃದ್ಧಿ, ಗ್ರಾಮೀಣ ವಸತಿ ಕ್ಷೇತ್ರಗಳು ಸೇರಿದಂತೆ ವಿವಿಧ ಕ್ಷೇತ್ರಗಳನ್ನು ಒಳಗೊಂಡಿವೆ. ಈ ಸಂದರ್ಭದಲ್ಲಿ ಪ್ರಧಾನಿ, ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಟೆಲಿಕಾಂ ಸಂಪರ್ಕ ಕ್ಷೇತ್ರದಲ್ಲಿ, ಸ್ವದೇಶಿ ತಂತ್ರಜ್ಞಾನದೊಂದಿಗೆ ಸುಮಾರು ೩೭ ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ ೯೭ ಸಾವಿರದ ೫೦೦ ಕ್ಕೂ ಹೆಚ್ಚು ಮೊಬೈಲ್ ೪ ಟವರ್‌ಗಳನ್ನು ಪ್ರಧಾನಿ ಉದ್ಘಾಟಿಸಲಿದ್ದಾರೆ.. ಸುಮಾರು ೨೬ ಸಾವಿರದ೭೦೦ ಹಳ್ಳಿಗಳನ್ನು ಸಂಪರ್ಕಿಸುತ್ತದೆ. ಸಂಪರ್ಕ ಮತ್ತು ಪ್ರಾದೇಶಿಕ ಬೆಳವಣಿಗೆಯನ್ನು ಹೆಚ್ಚಿಸುವ ಪ್ರಮುಖ ರೈಲ್ವೆ ಯೋಜನೆಗಳಿಗೆ ಪ್ರಧಾನಿ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಇವುಗಳಲ್ಲಿ ಸಂಬಲ್ಪುರ್-ಸರ್ಲಾದಲ್ಲಿ ರೈಲು ಮೇಲ್ಸೇತುವೆಗೆ ಅಡಿಪಾಯ ಹಾಕುವುದು ಮತ್ತು ಕೊರಾಪುಟ್-ಬೈಗುಡ ಮಾರ್ಗ ಮತ್ತು ಮನಾಬರ್-ಕೊರಾಪುಟ್-ಗೋರಾಪುರ್ ಮಾರ್ಗದ ದ್ವಿಗುಣಗೊಳಿಸುವಿಕೆ ಸೇರಿವೆ.

><><><><><

ಪ್ರಧಾನಿ ನರೇಂದ್ರ ಮೋದಿ ಅವರು ಇಂದು ಬಿಎಸ್‌ಎನ್‌ಎಲ್‌ನ ೪ಜಿ ಸ್ಟ್ಯಾಕ್ ಸ್ವದೇಶಿ ಮನೋಭಾವವನ್ನು ಹೇಗೆ ಸಾಕಾರಗೊಳಿಸುತ್ತದೆ ಎಂಬುದನ್ನು ಬಿಂಬಿಸುವ ಲೇಖನವನ್ನು ಹಂಚಿಕೊಂಡಿದ್ದಾರೆ. ಕೇಂದ್ರ ಸಚಿವ ಜ್ಯೋತಿರಾದಿತ್ಯ ಎಂ. ಸಿಂಧಿಯಾ ಅವರ ಎಕ್ಸ್ ಖಾತೆಯ

ಪೋಸ್ಟ್ ಗೆ ಪ್ರತಿಕ್ರಿಯಿಸಿದ  ಅವರು, ೨೨ ದಶಲಕ್ಷ ಭಾರತೀಯರನ್ನು ಸಂಪರ್ಕಿಸುವ ೯೨,೦೦೦ ಕ್ಕೂ ಹೆಚ್ಚು ತಾಣಗಳೊಂದಿಗೆ, ಇದು ಅವಲಂಬನೆಯಿಂದ ಆತ್ಮವಿಶ್ವಾಸದತ್ತ ಭಾರತದ ಪ್ರಯಾಣವನ್ನು ಪ್ರತಿಬಿಂಬಿಸುತ್ತದೆ. ಉದ್ಯೋಗ, ರಫ್ತು, ಹಣಕಾಸಿನ ಪುನರುಜ್ಜೀವನ ಮತ್ತು ಆತ್ಮನಿರ್ಭರ ಭಾರತದ ದೃಷ್ಟಿಕೋನವನ್ನು ಮುನ್ನಡೆಸುತ್ತದೆ," ಎಂದು ಹೇಳಿದ್ದಾರೆ.

><><><><><

ಬಹುಪಕ್ಷೀಯತೆ ಒತ್ತಡದಲ್ಲಿರುವಾಗ ಬ್ರಿಕ್ಸ್ ತರ್ಕಬದ್ಧ ಮತ್ತು ರಚನಾತ್ಮಕ ಬದಲಾವಣೆಯ ಬಲವಾದ ಧ್ವನಿಯಾಗಿ ದೃಢವಾಗಿ ನಿಂತಿದೆ ಎಂದು ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಪ್ರತಿಪಾದಿಸಿದ್ದಾರೆ. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ೮೦ನೇ ಅಧಿವೇಶನದ ನೇಪಥ್ಯದಲ್ಲಿ ನ್ಯೂಯಾರ್ಕ್ ನಲ್ಲಿ ಬ್ರಿಕ್ಸ್ ವಿದೇಶಾಂಗ ಸಚಿವರ ಸಭೆಯನ್ನು ಆಯೋಜಿಸುವ ಸಂದರ್ಭದಲ್ಲಿ ಡಾ. ಜೈಶಂಕರ್ ಈ ಹೇಳಿಕೆ ನೀಡಿದ್ದಾರೆ. ಪ್ರಕ್ಷುಬ್ಧ ಜಗತ್ತಿನಲ್ಲಿ, ಬ್ರಿಕ್ಸ್ ಶಾಂತಿ ನಿರ್ಮಾಣ, ಸಂವಾದ, ರಾಜತಾಂತ್ರಿಕತೆ ಮತ್ತು ಅಂತಾರಾಷ್ಟ್ರೀಯ ಕಾನೂನಿನ ಅನುಸರಣೆಯ ಸಂದೇಶವನ್ನು ಬಲಪಡಿಸಬೇಕಿದೆ  ಎಂದು ಸಚಿವರು ಒತ್ತಾಯಿಸಿದ್ದಾರೆ. ವಿಶ್ವಸಂಸ್ಥೆಯ ಪ್ರಮುಖ ಅಂಗಗಳ, ವಿಶೇಷವಾಗಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಸಮಗ್ರ ಸುಧಾರಣೆಗಾಗಿ ಬ್ರಿಕ್ಸ್ ತನ್ನ ಸಾಮೂಹಿಕ ಕರೆಯನ್ನು ಹೆಚ್ಚಿಸಬೇಕು ಎಂದಿದ್ದಾರೆ. ಇದಲ್ಲದೆ, ವ್ಯಾಪಾರದ ಹರಿವಿನ ಮೇಲೆ ಹೆಚ್ಚುತ್ತಿರುವ ರಕ್ಷಣಾತ್ಮಕತೆ, ಸುಂಕದ ಚಂಚಲತೆ ಮತ್ತು ಸುಂಕರಹಿತ ಅಡೆತಡೆಗಳ ಪರಿಣಾಮವನ್ನು ಒತ್ತಿ ಹೇಳಿದ ಸಚಿವರು, ಬ್ರಿಕ್ಸ್ ಬಹುಪಕ್ಷೀಯ ವ್ಯಾಪಾರ ವ್ಯವಸ್ಥೆಯನ್ನು ರಕ್ಷಿಸಬೇಕು ಎಂದು ಪ್ರತಿಪಾದಿಸಿದ್ದಾರೆ.  ತಂತ್ರಜ್ಞಾ ಮತ್ತು ನಾವೀನ್ಯತೆ ಬ್ರಿಕ್ಸ್ ಸಹಕಾರದ ಮುಂದಿನ ಹಂತವನ್ನು ವ್ಯಾಖ್ಯಾನಿಸುತ್ತದೆ. ಭಾರತದ ಅಧ್ಯಕ್ಷತೆಯು ಆಹಾರ ಮತ್ತು ಇಂಧನ ಭದ್ರತೆ,

ಹವಾಮಾನ ಬದಲಾವಣೆ ಮತ್ತು ಡಿಜಿಟಲ್ ರೂಪಾಂತರ, ಸ್ಟಾರ್ಟ್‌ಅಪ್‌ಗಳು, ನಾವೀನ್ಯತೆ ಮತ್ತು ಬಲವರ್ಧಿತ ಅಭಿವೃದ್ಧಿ ಪಾಲುದಾರಿಕೆಗಳ ಮೂಲಕ ಸುಸ್ಥಿರ ಅಭಿವೃದ್ಧಿಯ ಮೇಲೆ ಕೇಂದ್ರೀಕರಿಸುತ್ತದೆ ಎಂದು ಅವರು ಹೇಳಿದರು.

><><><><><

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಪ್ಯಾಲೆಸ್ತೀನ್ ಜನರನ್ನು ಬೆಂಬಲಿಸುತ್ತಿದೆ ಎಂದು ಭಾರತದಲ್ಲಿನ ಪ್ಯಾಲೆಸ್ತೀನ್ ರಾಯಭಾರಿ ಅಬ್ದುಲ್ಲಾ ಅಬು ಶವೇಶ್ ಶ್ಲಾಘಿಸಿದ್ದಾರೆ. ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿದ ಶವೇಶ್, ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾರತ ಸರ್ಕಾರವು ಪ್ಯಾಲೆಸ್ತೀನ್ ನಿರಾಶ್ರಿತರಿಗೆ ಸಹಾಯ ಮಾಡುವ ಜವಾಬ್ದಾರಿಯನ್ನು ಹೊಂದಿರುವ ವಿಶ್ವಸಂಸ್ಥೆಯ ಪರಿಹಾರ ಮತ್ತು ಕಾಮಗಾರಿ ಸಂಸ್ಥೆಯನ್ನು ಬೆಂಬಲಿಸುತ್ತಿದೆ ಎಂದು ಒತ್ತಿ ಹೇಳಿದ್ದಾರೆ. ಭಾರತವು ಪ್ರಸ್ತುತ ಪ್ಯಾಲಿಸ್ಟೈನ್ ನಲ್ಲಿ ದಶಲಕ್ಷ ಡಾಲರ್ ಆಸ್ಪತ್ರೆ ಯೋಜನೆಯನ್ನು ನಿರ್ಮಿಸುತ್ತಿದೆ. ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಪ್ಯಾಲೆಸ್ತೀನ್ ಗೆ ದಿನದ ೨೪ ಗಂಟೆಯೂ ಸಂಪರ್ಕದಲ್ಲಿದೆ ಎಂದು ಅವರು ಹೇಳಿದ್ದಾರೆ.

><><><><><

ಆಕಾಶವಾಣಿಯ ಜನಪ್ರಿಯ ಮಾಸಿಕ ಕಾರ್ಯಕ್ರಮ 'ಮನ್ ಕಿ ಬಾತ್'ನಲ್ಲಿ ನಾಳೆ ಬೆಳಗ್ಗೆ ೧೧ ಗಂಟೆಗೆ ಪ್ರಧಾನಿ ನರೇಂದ್ರ ಮೋದಿ, ದೇಶ-ವಿದೇಶಗಳಲ್ಲಿರುವ ಭಾರತೀಯ ಸಮುದಾಯದೊಂದಿಗೆ ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಳ್ಳಲಿದ್ದಾರೆ. ಇದು 'ಮನ್ ಕಿ ಬಾತ್' ಕಾರ್ಯಕ್ರಮದ ೧೨೬ನೇ ಆವೃತ್ತಿಯಾಗಿದೆ. ಈ ಕಾರ್ಯಕ್ರಮ ಆಕಾಶವಾಣಿ ಮತ್ತು ದೂರದರ್ಶನದ ಎಲ್ಲ ವಾಹಿನಿಗಳು, ಎಐಆರ್ ನ್ಯೂಸ್ ಜಾಲತಾಣ, ನ್ಯೂಸ್ ಆನ್ ಏರ್ ಮೊಬೈಲ್

ಆಪ್‌ನಲ್ಲಿ ಪ್ರಸಾರವಾಗಲಿದೆ. ಹಿಂದಿ ಅವತರಣಿಕೆಯ ನಂತರ ಪ್ರಾದೇಶಿಕ ಭಾಷೆಗಳಲ್ಲಿ ಈ ಕಾರ್ಯಕ್ರಮವನ್ನು ಕೇಳಬಹುದಾಗಿದೆ.

><><><><><

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ೮೦ನೇ ಅಧಿವೇಶನದಲ್ಲಿ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಅವರ ಭಾಷಣವನ್ನು ಭಾರತ ತೀವ್ರವಾಗಿ ಖಂಡಿಸಿದೆ. ಪಾಕಿಸ್ತಾನವು ಭಯೋತ್ಪಾದನೆಯನ್ನು ವೈಭವೀಕರಿಸುತ್ತಿದೆ ಮತ್ತು ಭಾರತ-ಪಾಕಿಸ್ತಾನ ಸಂಘರ್ಷದ ಬಗ್ಗೆ ಸತ್ಯಗಳನ್ನು ತಿರುಚುತ್ತಿದೆ ಎಂದು ಭಾರತ ಆರೋಪಿಸಿದೆ.

><><><><><

ಸೇವೆ ಮತ್ತು ಸುಶಾಸನ, ಅಂದರೆ ಸಾರ್ವಜನಿಕ ಸೇವೆ ಮತ್ತು ಉತ್ತಮ ಆಡಳಿತದ ಮಂತ್ರವನ್ನು ಅಳವಡಿಸಿಕೊಂಡಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ, ಪರಿವರ್ತನೆ ಮತ್ತು ಪ್ರಗತಿಯನ್ನು ತರಲು ಅವಿಶ್ರಾಂತವಾಗಿ ಶ್ರಮಿಸುತ್ತಿದೆ. ಆಕಾಶವಾಣಿ ನ್ಯೂಸ್ ನಮ್ಮ ಕೇಳುಗರಿಗೆ ವಿಶೇಷ ಸರಣಿ - "ಸೇವಾ ಪರ್ವ್" ಅನ್ನು ತರುತ್ತದೆ. ಇಂದಿನ ಸಂಚಿಕೆ, ನರೇಂದ್ರ ಮೋದಿ ಸರ್ಕಾರ, ಪ್ರಪಂಚದಾದ್ಯಂತ ಇರುವ ಭಾರತದಿಂದ ಕದ್ದ ವಿಗ್ರಹಗಳು ಮತ್ತು ಪ್ರಾಚೀನ ವಸ್ತುಗಳನ್ನು ಮರಳಿ ತರುವ ಮೂಲಕ, ದೇಶದ ಸಾಂಸ್ಕೃತಿಕ ಹೆಮ್ಮೆಯನ್ನು ಪುನರುಜ್ಜೀವನಗೊಳಿಸಿದೆ ಎಂಬುದರ ಕುರಿತದ್ದಾಗಿದೆ.

( ವರದಿ ) ಧ್ವನಿ- ಬಿ.ಎ.ಅಶೋಕ (೮೦ ಸೆಕೆಂಡ್ಸ್)

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ, ಭಾರತದ ಸಾಂಸ್ಕೃತಿಕ ಪ್ರಯಾಣ, ಸಂಪ್ರದಾಯದಲ್ಲಿ ಬೇರೂರಿದ್ದು, ಜಗತ್ತಿಗೆ ಮುಕ್ತವಾಗಿದೆ. ಭಾರತದಿಂದ ಕದ್ದ ವಿಗ್ರಹಗಳು

ಮತ್ತು ಪವಿತ್ರ ಅವಶೇಷಗಳನ್ನು ವಿದೇಶಗಳು,ಹಿಂದಿರುಗಿಸುವುದರಿಂದ ಹಿಡಿದು, ದೀರ್ಘಕಾಲ ಕಳೆದುಹೋದ ಪ್ರಾಚೀನ ವಸ್ತುಗಳನ್ನು ಪುನಃಸ್ಥಾಪಿಸುವವರೆಗೆ, ಇದು ಸಾಂಸ್ಕೃತಿಕ ಪುನರುಜ್ಜೀವನದ ಕಥೆಯಾಗಿದೆ, ಒಮ್ಮೆ ಕಳೆದುಹೋದದ್ದನ್ನು ಮರಳಿ ತರುವ ಕಥೆಯಾಗಿದೆ. ೨೦೧೪ ರಿಂದ, ೬೪೨ ಕದ್ದ ಪ್ರಾಚೀನ ವಸ್ತುಗಳನ್ನು ಪತ್ತೆಹಚ್ಚಲಾಗಿದೆ, ಒಮ್ಮೆ ವಿದೇಶಗಳಿಗೆ ಕಳ್ಳಸಾಗಣೆ ಮಾಡಲಾದ ಈ ಕಲಾಕೃತಿಗಳಲ್ಲಿ, ಹಲವನ್ನು ಈಗ ರಾಜತಾಂತ್ರಿಕ ಮಾರ್ಗಗಳು, ಕಾನೂನು ಕ್ರಮ ಮತ್ತು ಸಾಂಸ್ಕೃತಿಕ ಸಹಕಾರದ ಮೂಲಕ ಮರಳಿ ಪಡೆಯಲಾಗುತ್ತಿದೆ. ಈ ವರ್ಷದ ಅತ್ಯಂತ ಪ್ರಸಿದ್ಧವಾದ ಮರಳುವಿಕೆಗಳಲ್ಲಿ ಒಂದು ಕ್ರಿ.ಪೂ ೩ ನೇ ಶತಮಾನದ ಹಿಂದಿನ ಭಗವಾನ್ ಬುದ್ಧನ ಪಿಪ್ರಾಹ್ವಾ ಅವಶೇಷಗಳು. ಪ್ರಧಾನಿ ಮೋದಿ ಈ ಕಾರ್ಯಕ್ರಮವನ್ನು "ಭಾರತೀಯ ಪರಂಪರೆಗೆ ಸಂತೋಷದಾಯಕ ದಿನ" ಎಂದು ಕರೆದರು. ಮರಳಿ ಪಡೆದ ಇತರ ಪ್ರಾಚೀನ ವಸ್ತುಗಳಲ್ಲಿ, ಇಂಗ್ಲೇಂಡ್ ನಿಂದ, ಬ್ರಹ್ಮ ಮತ್ತು ಬ್ರಾಹ್ಮಣಿಯ ಕಲ್ಲಿನ ಶಿಲ್ಪ, ಅಮೇರಿಕಾದಿಂದ, ದುರ್ಗೆಯ ಕಲ್ಲಿನ ಚಿತ್ರ, ನೃತ್ಯ ಭಂಗಿಯಲ್ಲಿರುವ ನಟರಾಜನ ಮರಳುಗಲ್ಲಿನ ಚಿತ್ರ, ಬಾಹುಬಲಿಯ ಲೋಹದ ಚಿತ್ರ, ಆಸ್ಟ್ರೇಲಿಯಾದಿಂದ, ಕುಳಿತ ಬುದ್ಧ, ಕೆನಡಾದಿಂದ ಗಿಳಿ ಮಹಿಳೆ, ಸೇರಿವೆ. ಅಂತಹ ಕೆಲವು ವಸ್ತುಗಳನ್ನು ಪ್ರಧಾನಿ ಮೋದಿ ಅವರ ವಿದೇಶ ಭೇಟಿಗಳ ಸಮಯದಲ್ಲಿ ಅವರಿಗೆ ಹಿಂತಿರುಗಿಸಲಾಯಿತು.

><><><><><

ನವೆದೆಹಲಿಯ ಜವಾಹರ್ ಲಾಲ್ ನೆಹರು ಕ್ರೀಡಾಂಗಣದಲ್ಲಿ ಇಂದು ೧೨ನೇ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್ ಷಿಪ್ -೨೦೨೫ಕ್ಕೆ ವಿಧ್ಯುಕ್ತ ಚಾಲನೆ ದೊರೆಯಲಿದೆ. ೯ ದಿನಗಳು ನಡೆಯಲಿರುವ ಕ್ರೀಡಾಕೂಟದಲ್ಲಿ ೧೮೬ ಪದಕ ಸ್ಪರ್ಧೆಗಳು ನಡೆಯಲಿವೆ.೧೦೧ ಪುರುಷರು, ೮೪

ಮಹಿಳೆಯರು ಮತ್ತು ೧ ಮಿಶ್ರ ಸ್ಪರ್ಧೆಯನ್ನು ಒಳಗೊಂಡಿದೆ.  ಅಕ್ಟೋಬರ್ ೫ರಂದು ಕೂಟಕ್ಕೆ ತೆರೆ ಬೀಳಲಿದೆ.

><><><><><

ಯುನೈಟೆಡ್ ಅರಬ್ ಎಮಿರೇಟ್ಸ್ ನಲ್ಲಿ ನಡೆಯುತ್ತಿರುವ ಏಷ್ಯಾ ಕಪ್ ಟಿ೨೦ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಭಾರತ ಮತ್ತು ಪಾಕಿಸ್ತಾನ ತಂಡಗಳು ಮುಖಾಮುಖಿಯಾಗಲಿವೆ.ದುಬೈ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಾಳೆ ನಡೆಯಲಿರುವ ಪಂದ್ಯಭಾರತೀಯ ಕಾಲಮಾನ ರಾತ್ರಿ ಲಕ್ಕೆ ಆರಂಭವಾಗಲಿದೆ. ಸಾಂಪ್ರದಾಯಿಕ ಎದುರಾಳಿಗಳಾದ ಭಾರತ ಮತ್ತು ಪಾಕಿಸ್ತಾನ ತಂಡಗಳು ೪೧ ವರ್ಷಗಳ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಫೈನಲ್ ನಲ್ಲಿ ಇದೇ ಮೊದಲ ಬಾರಿ ಎದುರಾಗುತ್ತಿವೆ.

><><><END><><><